ಫಾರೆಸ್ಟ್ ಇಲಾಖಾ.

ತಾರೀಖು 27ನೇ ಫಿಬ್ರವರೀ 1887.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಗವರ್ಮೆಂಟ್ ಫಾರಸ್ಟುಗಳಿಂದಲೂ ಹಿಡುವಳೀ ಜಮೀನ್‌ಗಳಿಂದಲೂ, 1887—88ನೇ ಮುಂದಿನ ಸರ್ಕಾರ್ ಸಾಲಿನಲ್ಲಿ ಇದರಡೀಕಂಡ ತೇದಾದುವುಳ್ಳ ವಣಗಿದ ಗಂಧದಮರಗಳು ಮತ್ತು ಹಳೆ ಗಂಧದ ಮರದ ಬೇರುಗಳನ್ನು ಕ್ರಮವಾಗಿ ಚಿಕ್ಕತಯಾರ್ಮಾಡಿ ಅಂದರೆ ಮೇಲ್‌ಗಡೆ ಸ್ವಲ್ಪ ಬಿಳಿಮರ ಸಹಿತವಾಗಿ ಕಂಟ್ರಾಕ್ಟು ಮೂಲಕ ಜಮಾಯಿಸಿ ಹಾಸನದ ಸಂದಲ್ ಕೋಠಿಯಲ್ಲಿ ಒಪ್ಪಿಸುವ ಬಗ್ಗೆ ಇದರ ದೆಶೇಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.

			ಟನ್‌ಗಳು.
1.	ಹಾಸನ ತಾಲ್ಲೂಕು ಗ್ರಾಮದ ಸಬ್ ತಾಲ್ಲೂಕು ದೇಖೀಲ್		40
2.	ಅರಸೀಕೆರೆ ತಾಲ್ಲೂಕು	.. ..	30
3.	ಚನ್ನರಾಯಪಟ್ಟಣದ ತಾಲ್ಲೂಕು	.. ..	10
4.	ಹೊಳೇನರಸೀಪುರ ಡಿಟೋ	.. ..	10
5.	ಅರಕಲ್‌ಗೂಡು ಡಿಟೋ	.. ..	40
6.	ಮಂಜರಾಬಾದ್ ಡಿಟೋ	.. ..	60
7.	ಬೇಲೂರು ಡಿಟೋ	.. ..	60
		ಜಮ್ಲಾ	250

2. ದರಖಾಸ್ತುಗಳು "ಹಾಸನದ ಕೋಠೀಗೆ ವಣಗಿದ ಗಂಧದ ಮರಗಳನ್ನೂ ಹಳೇ ಗಂಧದಮರದ ಬೇರುಗಳನ್ನೂ ಸರಬರಾಯಿ ಮಾಡುವ ಬಗ್ಗೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ಸರಬರಾಯಿ ಮಾಡುವ ಬಗ್ಗೆ ವಪ್ಪಿಕೊಳ್ಳುವ ತೇದಾದಿನ ಮೇಲೆ ದರ ಟನ್ ವಂದಕ್ಕೆ ನಾಲ್ಕು ರೂಪಾಯಿ ಮೇರೆ ಆಗುವ ಮೊಬಲಗನ್ನ ನಗದಾಗಿಯಾಗಲೀ ಕರ್ಚಿಸಿ ನೋಟಿನ ಮೂಲಕವಾಗಿಯಾಗಲೀ ದರಖಾಸ್ತಿನೊಡನೆ ಕಳುಹಿಲ್ಪಟ್ಟ ಹೊರತು ಅನ್ಯಥಾ ಯಾವ ದರಖಾಸ್ತು ಅಂಗೀಕರಿಸಲ್ಪಡಲಾರದು.

4. ಪ್ರತಿದರಖಾಸ್ತಿನಲ್ಲಿಯೂ, ದರಖಾಸ್ತುದಾರನು ವಣಗಿದ ಮರಗಳಿಗೂ ಮತ್ತು ಹಳೇ ಬೇರುಗಳಿಗೂ ಅವುಗಳು ತಯಾರ್ಮಾಡಿ ವಿಂಗುಡಿಸಲ್ಪಟ್ಟ ತರುವಾಯ ಕೋಠೀಯಲ್ಲಿ ತೂಕಮಾಡಲ್ಪಟ್ಟು ದಾಸ್ತ್ ಮಾಡಲ್ಪಟ್ಟ ತೇದಾದಿಗೆ ದರ ಟನ್ ವಂದಕ್ಕೆ ಖಾಯಿಷ್ ಮಾಡುವ ಬೇರೆಬೇರೆ ಕಮ್ಮಿದರವನ್ನು ನಮೂದಿಸತಕ್ಕದ್ದು.

5. ಡಿಪ್ಯೂಟಿ ಕಮ್ಮಿಷನರು, ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ; ಮತ್ತು ಹಾಂಗೆ ತಿರಸ್ಕರಿಸುವ ಬಗ್ಗೆ ಅವರು ಯಾವ ಕಾರಣವೂ ತಿಳಿಸಬೇಕಾದ್ದಿಲ್ಲವು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ವಂದುವಾರದವಳಗಾಗಿ ತಕ್ಕ ಛಾಪಾಕಾಗದದಲ್ಲಿ ಕಂಟ್ರಾಕ್ಟು ಮುಚ್ಚಲಿಕೆಯನ್ನು ಬರೆದು ಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕ್ರಮವಾಗಿ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದ್ ಮಾಡಲ್ಪಟ್ಟ ದರಖಾಸ್ತುಗಳು ಇದರಡೀ ರುಜು ಮಾಡಿರುವವರಿಂದ 1887ನೇ ಇಸವಿ ಮಾರ್ಚೀ 31ನೇ ತಾರೀಖು ವರಿಗೆ ತೆಗದುಕೊಳ್ಳಲ್ಪಡುವದು.

9. ದರಖಾಸ್ತುದಾರರು, ಬಂದು ಯಾ ಹೆಚ್ಚು ತಾಲ್ಲೂಕುಗ ಗೋಸ್ಕರವಾಗಲೀ ವಟ್ಟು ಡಿಸ್ಟ್ರಿಕ್ಟು ಗೋಸ್ಕರವಾಗಲೀ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

10. ಕಂಟ್ರಾಕ್ಟಿನ ಷರತ್ತುಗಳು ಕುರಿತ ಯಾ ಇತರ ವಿಷಯಿಕವಾದ ವಿಶೇಷ ತಪಶೀಲುಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟು ಪ್ರೊಬೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಬೇಷನರ್, ಹಾಸನ ರೇಂಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 14ನೇ ಮಾರ್ಚೀ 1887.

ಇದರಿಂದ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕಿಗೆ ಶೇರಿದ ಕಾವಸಂದ್ರದ ಜಂಗಲ್‌ನಲ್ಲಿ ಒಂದು ಅಥವಾ ಎರಡು ವರುಷಗಳ ವರಿಗೆ ಸಾದೆ ಕೆಡದುಕೊಳ್ಳುವ ಹಕ್ಕನ್ನು ಅಪೇಕ್ಷಿಸತಕ್ಕವರಿಂದ ಬರುವ ಮೊಹರ್ಮಾಡಿದ ದರಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು 1887ನೇ ಇಸವಿ ಏಪ್ರೆಲ್ 20ನೇ ತಾರೀಖಿನವರಿಗೆ ತೆಗದುಕ್ಕೊಳ್ಳುವರು:—

2. ಈ ಜಂಗಲ್‌ನಿಂದಾ ಸಾಗಿಸಲ್ಪಡುವ ಕತ್ತರಿಸದೇ ಇರುವ ಸಾದೆಯು ಅಥವಾ ಸಣ್ಣ ಸಣ್ಣ ತುಂಡುಗಳಾಗಿ ಕೊಯಿದು, ಯಾ ಕತ್ತರಿಸಿ ಇರುವ ಸಾದೆಯ ಭಂಡಿ ಜೋಜಾ ವೊಂದಕ್ಕಾಗಲಿ ಅಥವಾ 68 ಘನ ಅಡಿಗಳುಳ್ಳ ಟ್ರ ಬಂದಕ್ಕಾಗಲಿ ಆಯಾ ದರಖಾಸ್ತುದಾರರು ಕೊಡಲು ವೊಪ್ಪುವ ಪೀಸಿಯರೇಜ್ ತೀರ್ವೆಯ ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇರಬೇಕು. ನಗದು ಅಥವಾ ನೋಟು ಮೂಲಕ (100) ರೂಪಾಯಿಗಳ ಡಿಪಾಜಿಟ್ ವೊಬಲಗಿನ ಸಮೇತ ಬಾರದೆ ಇರುವ ದರಖಾಸ್ತುಗಳು ತೆಗದುಕ್ಕೊಳ್ಳಲ್ಪಡುವದಿಲ್ಲ. ಈ ಕಂಟ್ರಾಕ್ಟಿನಲ್ಲಿ ಸಾಧಾರಣವಾಗಿರುವ ಎರಡು ಭಂಡಿ ಜೋಜಾಗಳು ವೊಂದು ಟನ್ ಯೆಂದು ಎಣಿಸಲ್ಪಡುವದು.

3. ಜಂಗಲ್‌ನಲ್ಲಿ ಯಾವ ಪ್ರದೇಶದಲ್ಲಿ ಮರಕಡಿಯತಕ್ಕದ್ದೂ ಅದನ್ನು ಕಡಿಯತಕ್ಕ ಮರಗಳನ್ನು ಸಹ ಫಾರೆಸ್ಟ್ ಇಲಾಖೆಯವರು ಗುರ್ತು ಮಾಡುತ್ತಾರೆ ಹಾಗೆ ಗುರ್ತು ಮಾಡಲ್ಪಟ್ಟ ಮರಗಳನ್ನು ಮಾತ್ರ ಕಂಟ್ರಾಕ್ಟುದಾರನು ಫಾರೆಸ್ಟ್ ಇಲಾಖೆಯವರು ನೇಮಿಸುವ ರೀತಿಯಲ್ಲಿ ಕಡದುಕೊಳ್ಳುವದಕ್ಕೂ ಮತ್ತು ತಿಂಗಳು ಬಂದಕ್ಕೆ 400 ಟ್ರ ಅಥವಾ ವರುಷ ಬಂದಕ್ಕೆ 4800 ಟ್ರಗಿಂತ ಹೆಚ್ಚಾಗಿ ಸಾದೆಯನ್ನು ಕಡಿದು ಸಾಗಿಸದೆ ಇರುವದಕ್ಕೂ ಬದ್ಧನಾಗಿ ಮುಚ್ಚಲಿಕೆ ಬರಮಕೊಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಸರ್ಕಾರದವರು ಗೊತ್ತು ಮಾಡುವ ಜುರ್ಮಾನೆ ತೆರಲಿಕ್ಕೆ ಗುರಿಯಾಗಿರುವದಾಗಿ ಸದರೀ ಮುಚ್ಚಲಿಕೆಯಲ್ಲಿ ನಮೂದಿಸಬೇಕು. ವೇಸಿಕೊಳ್ಳಲ್ಪಟ್ಟು ಇರುವ ಜಾತಿ ಮರಗಳನ್ನು ಫಲವೃಕ್ಷಗಳನ್ನು ಅಥವಾ ಇತರ ಜಿನಸಿ ಹುಟ್ಟುವಳಿಯಾಗತಕ್ಕ ಮರಗಳನ್ನು ಕಡಿಯಕೂಡದು, ಮತ್ತು ಅವುಗಳ ರೆಂಬೆಗಳನ್ನು ಸವರಲೂ ಕೂಡದು.

4. ಕಂಟ್ರಾಕ್ಟುದಾರನು ಸಾದೆಯನ್ನು ಭಂಡಿಗಳಿಗೆ ಭರ್ತೀಮಾಡಿಕ್ಕೊಂಡು ಹೋಗಿ ಭಂಗಾರದ ಗಣಿಯವರಿಗೆ ಟ್ರ ವೊಂದಕ್ಕೆ ಏಳು ರೂಪಾಯಿಗಳಿಗೆ ಜಾಸ್ತಿ ಇಲ್ಲದ ದರಪ್ರಕಾರ ಬಿಕರೀ ಮಾಡತಕ್ಕದ್ದು. ಇವನು ತರುವ ಸಾದೆಯು ಯಲ್ಲಾ ಗಣಿಯವರಿಗೂ ಬೇಕಾಗುವದಕ್ಕಿಂತ ಜಾಸ್ತಿಯಾಗಿದ್ದು ಅದು ಅವರಿಗೆ ಅವಶ್ಯಕವಿಲ್ಲದ ಪಕ್ಷದಲ್ಲಿ ಹಾಗೆ ವೇಯುವ ಸಾದೆಯನ್ನು ಅವನು ಮತ್ತೆಲ್ಲಾದರೂ ಯಾವ ದರದ ಪ್ರಕಾರವಾದರೂ ಮಾರಿಕೊಳ್ಳಬಹುದು.

5. ಈ ವಿಷಯದಲ್ಲಿ ಮೇಲೆ ನಮೂದಾಗುವದಕ್ಕಿಂತ ಹೆಚ್ಚು ತಪಸೀಲುಗಳು ತಿಳಿಯಬೇಕಾಗಿ ಇದ್ದಲ್ಲಿ ಅವುಗಳನ್ನು ಕಂಟ್ರಾಕ್ಟಿನ ಷರತ್ತುಗಳನ್ನೂ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

6. ಮೊಹರ್ಮಾಡಿದ ದರಖಾಸ್ತುಗಳನ್ನು ಸ್ಯ 1887ನೇ ಇಸವಿ ಏಪ್ರೆಲ್ 20ನೇ ತಾರೀಖು ಮಧ್ಯಾನ್ನ 12 ಘಂಟೆಗೆ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರಾಗಲಿ ಅಥವಾ ಅವರು ನೇಮಿಸುವ ಇತರ ಆಫೀಸರವರಾಗಲಿ ಆಗ್ಯೆ ಹಾಜರಿರುವ ದರಖಾಸ್ತುದಾರರ ಸಮಕ್ಷವು ವೊಡೆದು ನೋಡುವರು.

7. ಡೆಪ್ಯುಟಿ ಕಮ್ಮಿಷನರವರು ಕಾರಣ ನಮೂದಿಸದೆ ಯಾವ ದರಖಾಸ್ತನ್ನಾದರೂ ಅಂಗೀಕರಿಸತಕ್ಕ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡು ಇದ್ದಾರೆ.

8. ಯಾವ ಮನುಷ್ಯನ ದರಖಾಸ್ತು ಅಂಗೀಕರಿಸಲ್ಪಡುವದೋ ಅವನ ಡಿಪಾಜಿಟ್ ವೊಬಲಗು ನಿಲ್ಲಿಸಿಕ್ಕೊಳ್ಳಲ್ಪಡುವದು. ಅಂಥಾ ದರಖಾಸ್ತುದಾರನ ದರಖಾಸ್ತು ಮಂಜೂರಾದ ಸಂಗತಿ ಅವನಿಗೆ ತಿಳಿಸಲ್ಪಟ್ಟು (10) ದಿವಸಗಳ ವೊಳಗಾಗಿ ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಸದರೀಯವನು ಅವಶ್ಯಕವಾದ ಮುಚ್ಚಲಿಕೆ ಬರದು ಕೊಡಬೇಕು ಮತ್ತು ಕಂಟ್ರಾಕ್ಟು ಷರತ್ತುಗಳ ಪ್ರಕಾರ ಕ್ರಮವಾಗಿ ನಡದುಕೊಳ್ಳಲು ಜಾಮೀನು ತರೀಕ ನಗದು 500 ರೂಪಾಯಿ ತೇವಣಿ ಇಡಬೇಕು ಇದಕ್ಕೆ ತಪ್ಪಿದರೆ ಅವನ ಡಿಪಾಜಿಟ್ ವೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

9. ದರಖಾಸ್ತುದಾರರು ತಾವು ಕಳುಹಿಸುವ ದರಖಾಸ್ತುಗಳ ಮೇಲೆ "ಕಾವಸಂದ್ರದ ಜಂಗಲ್‌ನಿಂದ ಸಾದೆ ಕಡದು ತರುವ ಹಕ್ಕಿಗೋಸ್ಕರ ಕಳುಹಿಸಲ್ಪಟ್ಟ ದರಖಾಸ್ತು" ಎಂದು ಬರಿಯಬೇಕು.

ಸಿ. ಸುಬ್ಬರಾವ್,
ಡೆಪ್ಯುಟಿ ಕಮ್ಮಿಷನರ್.

Mysore Government Press, Bangalore.—1887.